ಸಂಯುಕ್ತ ಕರ್ನಾಟಕ

**Thursday, September 2nd, 2010**

# ಆಹ್ವಾನಿತ ಅಂತರಶಾಲಾ ಅಥ್ಲೆಟಿಕ್ಸ್ ಕೂಟ

**ಬೆಂಗಳೂರು, ಸೆ. 1:** ನಗರದ ಜೈನ್ ಅಕಾಡೆಮಿ ಫಾರ್ ಸ್ಪೋರ್ಟಿಂಗ್ ಎಕ್ಸಲೆನ್ಸ್ (ಜೆಎಎಸ್ಇ) ಇದೇ ತಿಂಗಳು 6ರಿಂದ 10ರ ವರೆಗೆ 2010ನೇ ಸಾಲಿನ ಅಂತರಶಾಲಾ ಅಥ್ಲೆಟಿಕ್ಸ್ ಕೂಟವನ್ನು ಹಮ್ಮಿಕೊಂಡಿದೆ.

ಜೆಐಆರ್ಎಸ್‌ನ ಕ್ರೀಡಾ ಸಂಕೀರ್ಣದಲ್ಲಿ ನಡೆಯಲಿರುವ ಈ ಕೂಟದಲ್ಲಿ ಫುಟ್‌ಬಾಲ್, ಬಾಸ್ಕೆಟ್‌ಬಾಲ್, ವಾಲೀಬಾಲ್, ಟೆನಿಸ್, ಟೇಬಲ್ ಟೆನಿಸ್, ಬ್ಯಾಡ್ಮಿಂಟನ್, ಸ್ಕ್ವ್ಯಾಶ್, ಈಜು, ಬೌಲಿಂಗ್, ಥ್ರೋಬಾಲ್ ಸೇರಿದಂತೆ 42ಕ್ಕೂ ಹೆಚ್ಚು ವಿವಿಧ ಬಗೆಯ ಕ್ರೀಡಾಸ್ಪರ್ಧೆಗಳು ಜರುಗಲಿವೆ.

ಬೆಂಗಳೂರಿನ 23 ಅಂತಾರಾಷ್ಟ್ರೀಯ ಶಾಲೆಗಳಿಂದ ಸುಮಾರು 2 ಸಾವಿರಕ್ಕೂ ಹೆಚ್ಚು ಕ್ರೀಡಾಸ್ಪರ್ಧಿಗಳು ಇದರಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದ್ದು, ಸ್ಪರ್ಧಾಕೂಟವು ಹಿರಿಯರ ಮತ್ತು ಕಿರಿಯರ ಬಾಲಕ ಹಾಗೂ ಬಾಲಕಿಯರ ವಿಭಾಗದಲ್ಲಿ ಜರುಗಲಿವೆ.